

# ಅದೇ ಕಥೆ ಅದೇ ವ್ಯಥೆ

**ದೇಶ ಯಾವುದಾದರೇನು? ಹೆಣ್ಣಿನ ಮೇಲಿನ ದೌರ್ಜನ್ಯ ತಪ್ಪಿದ್ದಲ್ಲ!**

ಪ್ರತಿಭಟನಾಕಾರನೊಬ್ಬ ತನ್ನ ಕೈಯಲ್ಲಿರುವ ಯಂತ್ರದಿಂದ ಬಣ್ಣದ ಹುಡಿಯನ್ನು ಚಿಮ್ಮುತ್ತಿದ್ದಾನೆ. ಆ ಹುಡಿ ಆವರಿಸಿಕೊಂಡು ಛಾಯಾಗ್ರಾಹಕನೊಬ್ಬ ಕಣ್ಣೊರೆಸಿಕೊಳ್ಳುತ್ತಿದ್ದಾನೆ. ಈ ಚಿತ್ರವನ್ನು ಒಮ್ಮೆ ನೋಡಿ. ಪ್ರತಿಭಟನೆಯ ಚಿತ್ರ ದೌರ್ಜನ್ಯಕ್ಕೆ ಒಳಗಾದವರ ಮನಸ್ಸಿನ ನೋವಿನಂತೆ ಕಾಣಿಸಿದರೆ, ಕ್ಯಾಮೆರಾ ಹಾಗೂ ಛಾಯಾಗ್ರಾಹಕನ ಕಣ್ಣು ಮಸುಕಾಗಿರುವುದು ನಮ್ಮ ವ್ಯವಸ್ಥೆಗೆ ಕವಿದಿರುವ ಪೊರೆಯಂತೆ ಕಾಣಿಸುತ್ತದೆ.

ಇಲ್ಲಿನ ಚಿತ್ರ, ಇಬ್ಬರು ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರವನ್ನು ವಿರೋಧಿಸಿ ಮೆಕ್ಸಿಕೊದಲ್ಲಿ ನಡೆದ ಪ್ರತಿಭಟನೆಗೆ ಸಂಬಂಧಿಸಿದೆ. ಅಲ್ಲಿನ ಘಟನೆಯನ್ನು ನೋಡಿದರೆ, ಉತ್ತರಪ್ರದೇಶದ ಉನ್ನಾವ್‌ನಲ್ಲಿ ನಡೆದ ಅತ್ಯಾಚಾರ ಪ್ರಕರಣ ನೆನಪಾಗುತ್ತದೆ. ವ್ಯತ್ಯಾಸ ಇಷ್ಟೇ: ಉನ್ನಾವ್ ಪ್ರಕರಣದ ಆರೋಪಿ ಶಾಸಕನಾದರೆ, ಮೆಕ್ಸಿಕೊದಲ್ಲಿನ ಆರೋಪಿಗಳು ಆರಕ್ಷಕರು.

‘ಅವರು ನನ್ನನ್ನು ರಕ್ಷಿಸುತ್ತಿಲ್ಲ, ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎನ್ನುವ ಭಿತ್ತಿಫಲಕಗಳನ್ನು ಪ್ರದರ್ಶಿಸಿ, ‘ಮೆಕ್ಸಿಕೊ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ’ ಎಂದು ಕಳವಳ ವ್ಯಕ್ತಪಡಿಸಿ ಕಳೆದ ವಾರ ಪ್ರತಿಭಟನೆ ನಡೆದಿದೆ. ಸಂತ್ರಸ್ತ ಹೆಣ್ಣುಮಕ್ಕಳಿಗೆ ನ್ಯಾಯ ದೊರೆಯಬೇಕೆಂದು ನೂರಾರು ಪ್ರತಿಭಟನಾಕಾರರು ಬೀದಿಗಿಳಿದು ದನಿಯೆತ್ತಿದ್ದು ಅಂತರರಾಷ್ಟ್ರೀಯ ಗಮನಸೆಳೆದಿತ್ತು. ಹಾಗೆ ಬೀದಿಗಿಳಿದು ನ್ಯಾಯ ಕೇಳಿದವರಲ್ಲಿ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚಾಗಿದ್ದುದು ವಿಶೇಷ.

ಮೊದಲ ಪ್ರಕರಣದಲ್ಲಿ, ಗಸ್ತು ವಾಹನದಲ್ಲಿ 17 ವರ್ಷದ ತರುಣಿಯೊಬ್ಬಳ ಮೇಲೆ ಪೊಲೀಸನೊಬ್ಬ ಅತ್ಯಾಚಾರವೆಸಗಿದ್ದರೆ, ಇನ್ನೊಂದು ಪ್ರಕರಣದಲ್ಲಿ ಮ್ಯೂಸಿಯಂ ಒಂದರಲ್ಲಿ 16 ವರ್ಷದ ಹೆಣ್ಣುಮಗಳ ಮೇಲೆ ಕಾಮುಕ ಪೊಲೀಸ್ ಮುಗಿಬಿದ್ದಿದ್ದಾನೆ. ಈ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆ ಹಳ್ಳಹಿಡಿಯುವಂತೆ ನೋಡಿಕೊಳ್ಳಲಾಗುತ್ತಿದೆ ಎನ್ನುವುದು ಪ್ರತಿಭಟನಾಕಾರರ ಆತಂಕ.

ಮೆಕ್ಸಿಕೊದಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಹೊಸತೇನಲ್ಲ. ಆ ದೇಶದಲ್ಲಿ ಪ್ರತಿದಿನ 9 ಮಹಿಳೆಯರು ಕೊಲೆಯಾಗುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಒಂದು ವರ್ಷದ ಅವಧಿಯಲ್ಲಿ 9 ಸಾವಿರ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಹಾಗೆಂದು ಮಹಿಳೆಯರ ಪಾಲಿಗೆ ಮೆಕ್ಸಿಕೊ ಅಸುರಕ್ಷಿತ ಎನ್ನುವಂತಿಲ್ಲ. 2018–19ರಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ 60 ಸಾವಿರ ಅತ್ಯಾಚಾರ ಪ್ರಕರಣಗಳನ್ನು ಪೊಲೀಸರು ದಾಖಲಿಸಿದ್ದಾರೆ. ಇನ್ನು ಭಾರತದ ಕಥೆ ವಿವರಿಸುವುದೇ ಬೇಡ. ಇದರರ್ಥ ಇಷ್ಟೇ: ದೇಶ ಯಾವುದಾದರೂ, ಅಲ್ಲಿ ಹೆಣ್ಣಿಗೆ ಸಮಾನತೆಯ ಸ್ಥಾನಮಾನ ಮರೀಚಿಕೆಯಷ್ಟೇ.

ಮೆಕ್ಸಿಕೊ ನಗರದ ಮೇಯರ್ ಕೂಡ ಹೆಣ್ಣುಮಗಳು. ನಗರದ ಮೊತ್ತ ಮೊದಲ ಮಹಿಳಾ ಮೇಯರ್ ಎನ್ನುವ ಅಗ್ಗಳಿಕೆಯ ಆಕೆ, ಇಬ್ಬರು ಹೆಣ್ಣುಮಕ್ಕಳ ಅತ್ಯಾಚಾರವನ್ನು ವಿರೋಧಿಸಿ ನಡೆದ ಪ್ರತಿಭಟನೆಯನ್ನು ಬಣ್ಣಿಸಿರುವುದು ಹೀಗೆ: ‘ಈ ಪ್ರತಿಭಟನೆ ಹಿಂಸೆಗೆ ಪ್ರೇರಣೆ ನೀಡುವಂತಿದೆ’.

■ ಎ. ರಾಮು




!ಉಚಿತ ಭವಿಷ್ಯ ಹೇಳುತ್ತಾರೆ!

ಬಹು ವರ್ಷಗಳಿಂದ ಜನರ ಪ್ರೀತಿ ವಿಶ್ವಾಸಗಳಿಸಿ ಫೋನಿನ ಮುಖಾಂತರ ಭವಿಷ್ಯವನ್ನು ಹೇಳುತ್ತಾರೆ.

ನಿಮ್ಮ ಜೀವನದ ಭವಿಷ್ಯ ತಿಳಿಸುತ್ತಾರೆ. ಗಂಡ–ಹೆಂಡತಿ ಕಿರಿಕಿರಿ, ಪ್ರೀತಿ–ಪ್ರೇಮ ವಿಚಾರ, ಶತ್ರುಗಳಿಂದ ತೊಂದರೆ, ಸಂತಾನ ಭಾಗ್ಯ, ಸಾಲಬಾಧೆ, ಪ್ರಮೋಷನ್, ವಿದೇಶ ಪ್ರಯಾಣ, ಜಮೀನಿನ ವಿಚಾರದಂತಹ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿದ್ದರು ಕೆಲವೇ ದಿನಗಳಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.



ಸ್ಥಳ: ಎಸ್. ಬಿ. ಆರ್. ಕಾಂಪ್ಲೆಕ್ಸ್, ಕಾರ್ಪೊರೇಷನ್ ಬ್ಯಾಂಕ್ ಪಕ್ಕದಲ್ಲಿ, ಹೊಸೂರು ಮುಖ್ಯ ರಸ್ತೆ, ಚಂದಾಪುರ, ಬೆಂಗಳೂರು–560081

ವಿಫ್ಲೋ ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದದ್ದರೆ ಇವರನ್ನೇ ಸಂಪರ್ಕಿಸಿ.

ಪಂ॥. ಎಸ್ ರಾಘವ ಜೋಷಿ

ಶ್ರೀ ಗುರು ರಾಘವೇಂದ್ರ ಸ್ವಾಮಿ ಆರಾಧಕರು

ಇವರನ್ನು ಸಂಪರ್ಕಿಸಿ ಅಥವಾ ಭೇಟಿಮಾಡಿ 9845777511/ 9901173383